ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜ ನಿ : ಸುಮಪ : 2020–21 ದಿನಾಂಕ : 19–08–2020

# ಪತ್ರಿಕಾ ಆಮಂತ್ರಣ

1. ಡಿ. ದೇವರಾಜ ಅರಸು ರವರ 105ನೇ ಜನ್ಮ ದಿನಾಚರಣೆ ಆಚರಣೆ :

ಪ್ರತಿಮೆಗೆ ಮಾಲಾರ್ಪಣೆ :

ಬಿ. ಎಸ್. ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ : 20–08–2020, ಗುರುವಾರ, ಸಮಯ : ಬೆಳಿಗ್ಗೆ 10–30 ಗಂಟೆಗೆ

ಸ್ಥಳ : ವಿಧಾನಸೌಧದ ಪಶ್ಚಿಮ ದ್ವಾರ, ಬೆಂಗಳೂರು.

2. ಪತ್ರಿಕಾಗೋಷ್ಠಿ :

ಬಿ. ಸಿ. ಪಾಟೀಲ್,
ಕೃಷಿ ಸಚಿವರು

ದಿನಾಂಕ : 20–08–2020, ಗುರುವಾರ, ಸಮಯ : ಮಧ್ಯಾಹ್ನ 1–30 ಗಂಟೆಗೆ
ಸ್ಥಳ : ಕೊಠಡಿ ಸಂಖ್ಯೆ 406, ವಿಕಾಸ ಸೌಧ, ಕೃಷಿ ಸಚಿವರ ಕಚೇರಿ, ಬೆಂಗಳೂರು

3. ಸಿಬಿಎಸ್‌ಸಿ (ಎನ್‌ಸಿಇಆರ್‌ಟಿ) ಕನ್ನಡ ಪಠ್ಯ ಪುಸ್ತಕ ಬಿಡುಗಡೆ ಸಮಾರಂಭ :

ಎಸ್. ಸುರೇಶ್‌ಕುಮಾರ್,

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

**ದಿನಾಂಕ : 20–08–2020 ಗುರುವಾರ ಸಮಯ : ಅಪರಾಹ್ನ 3–00 ಗಂಟೆಗೆ**

**ಸ್ಥಳ : ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಭಾಂಗಣ,**

**ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು –560 003.**

# ಪತ್ರಿಕಾ ಪ್ರಕಟಣೆ

## "ಜಲಾಮೃತ" ಕೈಪಿಡಿ 2020 ಬಿಡುಗಡೆ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

ಜಲ ಸಂರಕ್ಷಣೆ, ನೀರಿನ ಬಳಕೆ, ಹಸರೀಕರಣ ಅನುಷ್ಠಾನಕ್ಕೆ ಈ ವಿಶೇಷ ಕೈಪಿಡಿಯನ್ನು ರೂಪಿಸಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ನೀರಿನ ಬಗ್ಗೆ ಜಾಗೃತಿ ಮೂಡಿಸುವ ಯೀಜನೆ ಜಲಾಮೃತ. ನೀರಿನ ಬಳಕೆ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಈ ವಿಶೇಷ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತಂದಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ಅವರು ತಿಳಿಸಿದರು.

ಇಂದು ವಿಧಾನಸೌಧದಲ್ಲಿ ನಡೆದ "ಜಲಾಮೃತ" ಕೈಪಿಡಿ 2020 ಯನ್ನು ಬಿಡುಗಡೆ ಮಾಡಿ ಮಾತನಾಡಿದ ಅವರು ಅಂತರ್ ಜಲ ಚೇತನ ಮೂಲಕ ನೀರು ತುಂಬಿಸುವ ಕೆಲಸ ಆಗ್ತಿದೆ. ಕೆರೆಗಳ ಪುನಶ್ಚೇತನ ಮಾಡುವ ಕೆಲಸ ಸರ್ಕಾರ ಮಾಡ್ತಿದೆ.ನೀರನ್ನು ಸದ್ಬಳಕೆ ಮಾಡಿಕೊಳ್ಳೊ ನಿಟ್ಟಿನಲ್ಲಿ ಅನೇಕ ಕಾರ್ಯಕ್ರಮ ಸರ್ಕಾರ ಜಾರಿಗೆ ತರುತ್ತಿದೆ ಎಂದು ಹೇಳಿದರು.

ಈ ಜಲಾಮೃತ ಕೈಪಿಡಿಯ ಪ್ರತಿಗಳನ್ನು ರಾಜ್ಯದ ಎಲ್ಲ ಜಿಲ್ಲಾ ಪಂಚಾಯತಿಗೆ ಕಳುಹಿಸಲು ಕ್ರಮಕೈಗೊಳ್ಳಲಾಗುವುದು. ಜನರು ಈ ಕೈಪಿಡಿ ಬಳಸಿಕೊಂಡು ನೀರಿನ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಗ್ರಾಮ ಪಂಚಾಯಿತಿ ಚುನಾವಣೆಗೆ ಸರ್ಕಾರ ಸಿದ್ದತೆ ಮಾಡಿಕೊಂಡಿದೆ, ಈಗಾಗಲೇ ಮೀಸಲಾತಿ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ಪ್ರಕಟಿಸಿದೆ. ಚುನಾವಣೆ ಆಯೋಗ ಸೂಚನೆ ಕೊಟ್ಟ ಕೂಡಲೇ ಚುನಾವಣೆಗೆ ನಾವು ಸಿದ್ದ ಎಂದು ತಿಳಿಸಿದರು.

### ಈ ಕೈಪಿಡಿಯಲ್ಲಿರುವ ಒಟ್ಟು 7 ಅಧ್ಯಾಯಗಳ ಕಿರು ಪರಿಚಯ:

*ಅಧ್ಯಾಯ 1*

ಜಲ ಸಾಕ್ಷರತೆಯ ಮಹತ್ವ, ಜಲಚಕ್ರ, ಭೂಮಿಯ ಮೇಲೆ ಸಿಗುವಂತಹ ನೀರಿನ ರೂಪಗಳು, ರಾಜ್ಯದಲ್ಲಿ ಮಳೆ ಹಂಚಿಕೆ. ಜಲ ಕ್ಷಮತೆಯಿಂದ ಭಾರತದಲ್ಲಿ ಉಂಟಾದ ಬರಗಾಲದ ಇತಿಹಾಸ, ಬರಗಾಲವನ್ನು ಎದುರಿಸಲು ಮತ್ತು ಹವಾಮಾನ ಬದಲಾವಣೆ ತಗ್ಗಿಸುವಿಕೆ ಮತ್ತು ಸೂಕ್ತ ಕ್ರಮ ಅಳವಡಿಸುವಿಕೆ.

*ಅಧ್ಯಾಯ 2*

ಜಲ ಸಂರಕ್ಷಣೆ ಮತ್ತು ಜಲ ಮೂಲಗಳ ಪುನರುಜ್ಜೀವನ, ಮಣ್ಣು ಮತ್ತು ನೀರಿನ ಸಂರಕ್ಷಣೆ ಕಾಮಗಾರಿಗಳಿಗೆ ಕ್ರಮಗಳು, ನಾಲಾ ಶ್ರೇಣಿಗಳು ಉಪಚಾರ ಮಾಡುವುದು ಹೇಗೆ. ಬರಡು ಮತ್ತು ಬಂಜರು ಭೂಮಿಯನ್ನು ಅಭಿವೃದ್ಧಿ ಪಡಿಸುವ ಕ್ರಮಗಳು, ಮಣ್ಣಿನ ತೇವಾಂಶ ಮತ್ತು ಫಲವತ್ತತೆ ಅಭಿವೃದ್ಧಿ ಪಡಿಸುವುದು. ಮಳೆ ನೀರು ಕೊಯ್ಲು, ಜಲ ಸಂಪನ್ಮೂಲಗಳ ಅಭಿವೃದ್ಧಿಯಲ್ಲಿ ಕೆರೆಗಳ ಇತಿಹಾಸ ಮತ್ತು ಮಹತ್ವ, ಪ್ರಾಚೀನ ಕಾಲದಲ್ಲಿ ಕೆರೆಯ ನಿರ್ಮಾಣದ ಸಮಗ್ರ ಅಭಿವೃದ್ಧಿಗೆ ಪಾಲಿಸುತ್ತಿದ್ದ 12 ಸೂತ್ರಗಳು, ಪ್ರಾಚೀನ ಕಾಲದಲ್ಲಿ ಕೆರೆ ನಿರ್ಮಾಣ ಸಮಗ್ರ ಅಭಿವೃದ್ಧಿಗೆ ಹನ್ನೆರಡು ಸೂತ್ರಗಳನ್ನು ತೈಲೂರು ವೆಂಕಟಕೃಷ್ಣ ಅವರ "ಪಾರಂಪರಿಕ ಕೆರೆ ಕಟ್ಟೆಗಳು ಅಳಿವು-ಉಳಿವು" ಪುಸ್ತಕದಿಂದ ಆಯ್ದುಕೊಂಡು ಈ ಕೈಪಿಡಿಯಲ್ಲಿ ಅಳವಡಿಸಿಕೊಳ್ಳಲಾಗಿದೆ.

*ಅಧ್ಯಾಯ 3*

ಜಲಾಮೃತ ಹೂಳೆತ್ತುವ ಕಾಮಗಾರಿಗಳ ಅನುಷ್ಠಾನ ಪ್ರಕ್ರಿಯೆ ಪಾಲನೆ, ಜಲಾನಯನ ಅಭಿವೃದ್ಧಿಯ ಮುಖ್ಯ ಉದ್ದೇಶ. ಅಂತರ್ಜಲ ಸಂಪನ್ಮೂಲ ಮತ್ತು ಬಳಕೆ ಪ್ರಮಾಣ ಮತ್ತು ಇತರೆ ಸಂಬಂಧಿಸಿದ ವಿಷಯಗಳನ್ನು ಉಲ್ಲೇಖಿಸಲಾಗಿದೆ.

ನೀರಿನ ಪ್ರಜ್ಞಾವಂತ ಬಳಕೆ, ಜಲವರ್ಷ, ನೀರಿನ ಆಯವ್ಯಯ ಮತ್ತು ಗ್ರಾಮ ಮಟ್ಟದಲ್ಲಿ ಜಲ ಭದ್ರತೆ ಹಾಗೂ ಗುಣಮಟ್ಟವನ್ನು ಕಾಪಾಡಲು ಬೇಕಾದ ಆಯವ್ಯಯ ಅಧ್ಯಯನಗಳನ್ನು ವಿಶ್ಲೇಷಿಸಲಾಗಿದೆ.

*ಅಧ್ಯಾಯ 4*

ಜಲ ಸಂರಕ್ಷಣೆಯಲ್ಲಿ ಅರಣ್ಯ ಗಳ ಪಾತ್ರ, ಸಾಮಾಜಿಕ ಮತ್ತು ನೆಡು ತೋಪುಗಳು, ನಗರ ಅರಣ್ಯಗಳು, ಉದ್ಯಾನಗಳ ಅಭಿವೃದ್ಧಿ, ಬುಟ್ಟಿಯಿಂದ ಬೆಟ್ಟಕ್ಕೆ ಪರಿಕಲ್ಪನೆಯನ್ನು ಮತ್ತು ವಿವರಿಸಲಾಗಿದೆ.

*ಅಧ್ಯಾಯ 5*

ವಿವಿಧ ಹಂತಗಳಲ್ಲಿ ಸಮುದಾಯಗಳ ಸಮಿತಿ ರಚನೆ, ಉದ್ದೇಶಗಳು ಮತ್ತು ಜವಾಬ್ದಾರಿಗಳು ಹಾಗೂ ಸಮುದಾಯಗಳ ಒಗ್ಗೂಡಿಸುವಿಕೆಯ ಬಗ್ಗೆ ವಿವರಿಸಲಾಗಿದೆ.

*ಅಧ್ಯಾಯ 6*

ಜಲಾಮೃತ ಮೊಬೈಲ್ ಆ್ಯಪ್‌ನಲ್ಲಿ ಕೆರೆಗಳ, ಮಳೆ ನೀರು ಸಂರಕ್ಷಣಾ ರಚನೆಗಳ ಹಾಗೂ ಹಸಿರೀಕರಣ ಗಿಡಿ ನೆಡಲು ಗಿಡಗಳ ಬೆಳವಣಿಗೆ ಸಂಕ್ಷಿಪ್ತ ಮಾಹಿತಿಯನ್ನು ಛಾಯಾ ಚಿತ್ರಗಳೊಂದಿಗೆ ಜಿಯೋ ಟ್ಯಾಗ್ ಮಾಡಿದ ವಿವರಗಳನ್ನು ನೋಡಬಹುದು.

*ಅಧ್ಯಾಯ 7*

ಜಲಾಮೃತ ಯೋಜನೆ ಮತ್ತು ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯನ್ನು ಒಗ್ಗೂಡಿಸುವಿಕೆ ಯೊಂದಿಗೆ ಮಾದರಿ ಅಂದಾಜು ವೆಚ್ಚದ ವಿವರಗಳು ಹಾಗೂ ನೀರಿನ ಆಯವ್ಯಯದ ಬೇಡಿಕೆ ಮತ್ತು ಲಭ್ಯತೆಯ ಅಂದಾಜು ವೆಚ್ಚವನ್ನು ಹಳ್ಳಿಗಳಿಂದ ಕ್ರೂಡೀಕರಿಸಿ ನಿಖರವಾಗಿ ಗ್ರಾಮ ಪಂಚಾಯತಿ ಮಟ್ಟದಲ್ಲಿ ಅಂದಾಜು ಮಾಡುವುದು.

ಶಿವಮೊಗ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿ ಮುಂಬರುವ ದಿನಗಳಲ್ಲಿ ಕ್ರಿಯಾ ಯೋಜನೆ ಮತ್ತು ವಿವರವಾದ ಯೋಜನಾ ವರದಿಗಳನ್ನು ತಯಾರಿಸಲು ತಾಂತ್ರಿಕ ಸಲಹೆಗಳನ್ನು ನೀಡಲು GIZ ಇಂಡೋ ಜರ್ಮನ್ ಸಹಭಾಗಿತ್ವದೊಂದಿಗೆ ಶಿವಮೊಗ್ಗ ಜಿಲ್ಲೆಯ ಅಬ್ಬಲಗೆರೆ ಗ್ರಾಮ ಪಂಚಾಯತಿಯಲ್ಲಿ ಸಂಯೋಜಿತ ಜಲ ಸಂರಕ್ಷಣಾ ಯೋಜನೆಯನ್ನು ಸಿದ್ದಪಡಿಸಿ ಮುಂಬರುವ ದಿನಗಳಲ್ಲಿ ಕಾರ್ಯ ತಂತ್ರ ಯೋಜನೆಗಳನ್ನು ರೂಪಿಸಲು ಸಹಕಾರಿ.

## ಕನ್ನಡ ಭಾಷಾ ಶಾಸ್ತ್ರೀಯ ಅಧ್ಯಯನ ಕೇಂದ್ರ ಶೀಘ್ರದಲ್ಲೇ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ):** ಬಹು ದಿನಗಳ ಬೇಡಿಕೆಯಾದ ಕನ್ನಡ ಭಾಷಾ ಶಾಸ್ತ್ರೀಯ ಅಧ್ಯಯನ ಕೇಂದ್ರ ಶೀಘ್ರದಲ್ಲೇ ಪೂರ್ಣ ಪ್ರಮಾಣದಲ್ಲಿ ಕಾರ್ಯಾರಂಭ ಮಾಡಲು ಅನುಮತಿ ನೀಡಲಾಗುವುದು ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವ ಡಾ॥ ರಮೇಶ್ ಪೋಖ್ರಿಯಾಲ್ ಆಶ್ವಾಸನೆ ನೀಡಿದ್ದಾರೆ.

ನವದೆಹಲಿಯಲ್ಲಿ ಪ್ರವಾಸೋದ್ಯಮ, ಕನ್ನಡ–ಸಂಸ್ಕೃತಿ ಮತ್ತು ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರಾದ ಸಿ.ಟಿ.ರವಿ ಅವರು ಡಾ॥ ರಮೇಶ್ ಪೋಖ್ರಿಯಾಲ್, ಕೇಂದ್ರ ಮಾನವ ಸಂಪನ್ಮೂಲ ಸಚಿವರನ್ನು ಭೇಟಿಯಾಗಿ ಕರ್ನಾಟಕದಲ್ಲಿ ಶಾಶ್ವತ ಕನ್ನಡ ಅಧ್ಯಯನ ಪೀಠದ ಕಟ್ಟಡ ಪ್ರಾರಂಭಿಸಲು ಅನುಮತಿ ನೀಡಬೇಕೆಂದು ಮನವಿ ಮಾಡಿದರು.ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದಡಾ॥ ರಮೇಶ್

ಪೋಖ್ರಿಯಾಲ್ಅವರು,ಕನ್ನಡಿಗರಬಹುದಿನಗಳಬೇಡಿಕೆಯಂತೆಆದಷ್ಟುಶೀಘ್ರದಲ್ಲಿಕಟ್ಟಡಪ್ರಾರಂಭಿಸಲುಕೇಂದ್ರದಿಂದಅನುಮತಿನೀಡಲಾಗುವುದು.ಯಾವುದೇಕಾರಣಕ್ಕೂವಿಳಂಬವಾಗುವುದಿಲ್ಲಎಂಬಭರವಸೆನೀಡಿದರು.

ರಾಜ್ಯಸರ್ಕಾರಸಲ್ಲಿಸಿರುವವಿಸ್ತೃತಯೋಜನಾವರದಿಇಲಾಖೆಕೈಸೇರಿದೆ.ಸದ್ಯದಲ್ಲೇಸಚಿವಸಂಪುಟಸಭೆಯಅನುಮೋದನೆಪಡೆಯಲಾಗುವುದು.ಬಳಿಕಕಟ್ಟಡನಿರ್ಮಾಣಕ್ಕೆಅಗತ್ಯವಿರುವಅನುದಾನಬಿಡುಗಡೆ, ಮೂಲಭೂತಸೌಕರ್ಯಸೇರಿದಂತೆಎಲ್ಲಾರೀತಿಯ ನೆರವುಕೇಂದ್ರದಿಂದಸಿಗಲಿದೆಎಂದುಅಭಯನೀಡಿದ್ದಾರೆ. ಮೈಸೂರಿನಚಾಮುಂಡಿಬೆಟ್ಟದತಪ್ಪಲಿನಲ್ಲಿಶಾಶ್ವತಕನ್ನಡಶಾಸ್ತ್ರೀಯಅಧ್ಯಯನಪೀಠಪ್ರಾರಂಭಿಸಲುಸರ್ಕಾರಉತ್ಸುಕತೆತೋರಿರುವುದುನನ್ನಗಮನಕ್ಕೆಬಂದಿದೆ.ವಿವಿಯುಜಾಗವನ್ನುಹಸ್ತಾಂತರಮಾಡಲುತೀರ್ಮಾನಿಸಿರುವುದುಆಶಾದಾಯಕಬೆಳವಣಿಗೆ.ಕೇಂದ್ರದಿಂದವಿಳಂಬವಾಗದಂತೆಎಷ್ಟುಸಾಧ್ಯವೋಅಷ್ಟುಶೀಘ್ರವಾಗಿಅನುಮತಿನೀಡುವುದಾಗಿಹೇಳಿದ್ದಾರೆ.

ಪ್ರಸ್ತುತಕನ್ನಡಶಾಸ್ತ್ರೀಯಅಧ್ಯಯನಕೇಂದ್ರವುಮೈಸೂರಿನಲ್ಲಿರುವ ಭಾರತೀಯ ಭಾಷಾಸಂಶೋಧನಾಸಂಸ್ಥೆಯಕಟ್ಟಡದಲ್ಲಿತಾತ್ಕಾಲಿಕವಾಗಿಕಾರ್ಯನಿರ್ವಹಿಸುತ್ತಿದೆ.
ಪೂರ್ಣಪ್ರಮಾಣದಲ್ಲಿಕಾರ್ಯಚಟುವಟಿಕೆಗಳುನಡೆಯುವಂತೆಶಾಶ್ವತಕಟ್ಟಡನಿರ್ಮಾಣಮಾಡಬೇಕೆಂಬುದುಕನ್ನಡಿಗರಬಹುದಿನಗಳಬೇಡಿಕೆಯಾಗಿದೆ.ಈಕನಸನ್ನುನನಸುಮಾಡಲುನಮ್ಮಸರ್ಕಾರಬದ್ಧವಾಗಿದೆಎಂದುತಿಳಿಸಿದ್ದಾರೆ.
ಇನ್ನುಕೇಂದ್ರಸರ್ಕಾರದಬಹುಉದ್ದೇಶಿತನೂತನರಾಷ್ಟ್ರೀಯಶಿಕ್ಷಣನೀತಿಜಾರಿಮಾಡಲಾಗಿದೆ.ಇದರಿಂದಾಗಿದೇಶದಪ್ರತಿಯೊಂದುಪ್ರಾದೇಶಿಕಭಾಷೆಗಳಿಗೆಹೆಚ್ಚಿನಮನ್ನಣೆಸಿಗಲಿದೆ.ನಾಡು, ನುಡಿ, ಇತಿಹಾಸ, ಪರಂಪರೆಗಳು, ಸಂಪ್ರದಾಯ ಸೇರಿದಂತೆ ಸ್ಥಳೀಯಸೊಗಡಿಗೆಎಲ್ಲಿಯೂಧಕ್ಕೆಯಾಗದಂತೆಕ್ರಮಕೈಗೊಳ್ಳಲಾಗಿದೆಎಂದುಹೇಳಿದರು.

ಹೊಸಶಿಕ್ಷಣನೀತಿಯಿಂದಸರ್ವರಿಗೂಗುಣಮಟ್ಟದಶಿಕ್ಷಣಲಭ್ಯವಾಗಬೇಕೆನ್ನುವುದುಕೇಂದ್ರಸರ್ಕಾರಆಕಾಂಕ್ಷೆಯಾಗಿದೆ.ಭಾರತವನ್ನುಜಾಗತಿಕಜ್ಞಾನಶಕ್ತಿಯನ್ನಾಗಿಸುವುದುಹೊಸಶಿಕ್ಷಣನೀತಿಯಪ್ರಮುಖಆಶಯವಾಗಿದೆ. ಐದುವರ್ಷದಒಳಗಿನಮಕ್ಕಳಿಗೆ 'ಬಾಲವಾಟಿಕಾ' ಆರಂಭಿಸುವುದು, ಹಂತ–ಹಂತವಾಗಿಕಲಿಕೆಆಗಲೆಂಬಕಾರಣಕ್ಕೆ 10+2 ಪದ್ಧತಿಯಬದಲಿಗೆ 5+3+3+4

ಪದ್ಧತಿಪರಿಚಯಮಾಡಿಕೊಡಲಾಗುತ್ತಿದೆ.ಆರನೇತರಗತಿನಂತರವೃತ್ತಿಪರಶಿಕ್ಷಣಕಲಿಕೆಪ್ರಾರಂಭಗೊಳಿಸುವಪ್ರಮುಖನಿರ್ಧಾರವನ್ನುಕೈಗೊಳ್ಳಲಾಗಿದೆ.

ಹೊಸಶಿಕ್ಷಣನೀತಿಯಲ್ಲಿಪರೀಕ್ಷಾವಿಧಾನದಲ್ಲಿಸುಧಾರಣೆಗೆಮಹತ್ವಕೊಡಲಾಗಿದೆ.ಬಹುವಿಧದಪರೀಕ್ಷೆಗೆತೀರ್ಮಾನಮಾಡಲಾಗಿದೆ.ವಾರ್ಷಿಕ, ಅರ್ಧವಾರ್ಷಿಕ, ಮಾಡ್ಯುಲ್ಮಾದರಿಪರೀಕ್ಷೆಗಳುನಡೆಯಲಿವೆ.ಮುಖ್ಯಪರೀಕ್ಷೆಯಪ್ರಾಮುಖ್ಯತೆಕಡಿಮೆಮಾಡುವಚಿಂತನೆಯಿದೆ.ವರ್ಷದಲ್ಲಿಎರಡುಬಾರಿಮುಖ್ಯಪರೀಕ್ಷೆಮಾಡಲಾಗುವುದು.ಸಮಗ್ರಫಲಿತಾಂಶವ್ಯವಸ್ಥೆಜಾರಿಗೆತರಲಾಗುತ್ತದೆ.ಹೀಗಾಗಿಮೂರುಹಂತದಲ್ಲಿವಿದ್ಯಾರ್ಥಿಯಸಾಮರ್ಥ್ಯಅಳೆಯುವರಿಪೋರ್ಟ್ಕಾರ್ಡ್ಕೊಡಲಾಗುವುದು.ಜೊತೆಗೆಉನ್ನತಶಿಕ್ಷಣಪೂರ್ತಿಯಾಗುವವರೆಗೆಒಂದೇಮಾದರಿಯರಿಪೋರ್ಟ್ನೀಡುವಬಗ್ಗೆಹೊಸಶಿಕ್ಷಣನೀತಿಯಲ್ಲಿದೆ.ಕನ್ನಡಭಾಷಾಬೆಳವಣಿಗೆಗೆಇದರಿಂದಸಾಕಷ್ಟುಅನುಕೂಲವಾಗಲಿದ್ದು,ಕರ್ನಾಟಕಇದರಸದುಪಯೋಗಪಡೆದುಕೊಳ್ಳಲಿಎಂದುಸಚಿವರುಆಶಿಸಿದರು.

ಇದೇವೇಳೆಸಚಿವಸಿ.ಟಿ.ರವಿಅವರುಈವರೆಗೂಇಲಾಖೆವತಿಯಿಂದಕೈಗೊಂಡಿರುವಕಾರ್ಯಚಟುವಟಿಕೆಯವಿಸ್ತೃತವರದಿಯನ್ನುಕೇಂದ್ರಸಚಿವರಿಗೆಹಸ್ತಾಂತರಿಸಿದರು.ತಮಿಳುನಾಡಿನಲ್ಲಿಪೂರ್ಣಪ್ರಮಾಣದಅಧ್ಯಯನಪೀಠಆರಂಭವಾಗಿಕಾರ್ಯಚಟುವಟಿಕೆಗಳುನಡೆಯುತ್ತಿರುವುದರಿಂದಅನೇಕಅವಕಾಶಗಳುಲಭಿಸಿವೆ. ಇದೇರೀತಿಕರ್ನಾಟಕಕ್ಕೂಇದರಪ್ರಯೋಜನಸಿಗಬೇಕೆಂದುಅಭಿಪ್ರಾಯಪಟ್ಟರು.

ಕನ್ನಡಭಾಷೆಗೆಕೇಂದ್ರೀಯಸ್ಥಾನಮಾನಸಿಗಬೇಕೆಂದುಕರ್ನಾಟಕಜನತೆಯಒತ್ತಾಸೆಯಾಗಿದೆ.ಪ್ರಾಚೀನಭಾರತೀಯಪರಂಪರೆಯನ್ನುಕಾಪಾಡಿಪೋಷಿಸುವುದರಲ್ಲಿಕನ್ನಡಭಾಷೆಯಬೆಳವಣಿಗೆಯಾವುದಕ್ಕೂಕಡಿಮೆಇಲ್ಲ. ಆದಷ್ಟುಶೀಘ್ರಕೇಂದ್ರಸರ್ಕಾರಇದಕ್ಕೆಅನುಮೋದನೆನೀಡಿದರೆಬಹುದಿನಗಳಕನಸುಈಡೇರುತ್ತದೆಎಂದುಮನವರಿಕೆಮಾಡಿದ್ದಾರೆ.ಇದೇವೇಳೆ ಮೂರುಸಮಿತಿಗೆಮುಖ್ಯಸ್ಥರುಹಾಗೂಸದಸ್ಯರನ್ನುನೇಮಕಮಾಡುವಂತೆಸಚಿವಸಿ.ಟಿ.ರವಿಅವರುಮನವಿಮಾಡಿದರು.ಕೇಂದ್ರಸಂಸದೀಯವ್ಯವಹಾರಗಳ ಸಚಿವರಾದ ಪ್ರಹ್ಲಾದ್ ಜೋಶಿಯವರುಉಪಸ್ಥಿತರಿದ್ದರು.

## ಆಕ್ಷೇಪಣೆ ಸಲ್ಲಿಸಲು ಅವಕಾಶ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

**ಬೈಯಪ್ಪನಹಳ್ಳಿ ಮೆಟ್ರೋ ಸ್ಟೇಷನ್‌ನಿಂದ ವೈಟ್‌ಫೀಲ್ಡ್ ಮೆಟ್ರೋ ಸ್ಟೇಷನ್ ವರೆಗಿನ ಮಾರ್ಗದ ಮಧ್ಯೆ ಬರುವ ಬೆನ್ನಿಗಾನಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 55 ಮತ್ತು 82 ರಲ್ಲಿ ಕೆರೆಯ ದಂಡೆಯ ಪಕ್ಕದ ಬೆಂಗಳೂರು ಕಡೆಯಿಂದ ಹಳೆ ಮದ್ರಾಸ್ ರಸ್ತೆಗೆ ಹಾದುಹೋಗುವ ರಸ್ತೆಯಲ್ಲಿ ಮೆಟ್ರೋ ಕಾಮಗಾರಿ ಕೈಗೊಳ್ಳುತ್ತಿದ್ದು, ಸದರಿ ಕಾಮಗಾರಿಗೆ 31 ಬೀಟೆ ಮರ ಹಾಗೂ 60 ವಿವಿಧ ಜಾತಿಯ ಮರಗಳು ಹೀಗೆ ಒಟ್ಟು 91 ಮರಗಳು ಅಡೆತಡೆಯಾಗಿರುತ್ತದೆ.**

**ಈ ಹಿನ್ನೆಲೆಯಲ್ಲಿ ನಾಗರೀಕರು ಹಾಗೂ ಪರಿಸರಾಸಕ್ತರು ಆಕ್ಷೇಪಣೆಗಳನ್ನು ಹಾಗೂ ಸಲಹೆ ಸೂಚನೆಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ನಗರ ವಿಭಾಗ, ಬೆಂಗಳೂರು ಇವರಿಗೆ ಪ್ರಕಟಣೆ ಪ್ರಕಟವಾದ 15 ದಿನಗಳೊಳಗೆ ಲಿಖಿತವಾಗಿ ನೀಡಲು ಅಧಿಕೃತ ಪ್ರಕಟಣೆ ತಿಳಿಸಿದೆ.**

### ಕೇಂದ್ರ ಸಚಿವರೊಂದಿಗೆ ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡಾ ಚಟುವಟಿಕೆಗಳ ಕುರಿತು ಸಚಿವ ಸಿ.ಟಿ. ರವಿ ಚರ್ಚೆ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

**ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡೆ, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಸಚಿವ ಸಿ. ಟಿ. ರವಿ ಅವರು ಕೇಂದ್ರ ಯುವ ವ್ಯವಹರ ಮತ್ತು ಕ್ರೀಡಾ ಸಚಿವ ಕಿರಣ್ ರಿಜಿಜು ಅವರನ್ನು ದೆಹಲಿಯಲ್ಲಿ ಭೇಟಿಯಾಗಿ, ಯುವ ಸಬಲೀಕರಣ ಮತ್ತು ಕ್ರೀಡಾ ಚಟುವಟಿಕೆಗಳ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಭಾರತ ಸರ್ಕಾರಕ್ಕೆ ಸಲ್ಲಿಸಿರುವ ಯೋಜನೆಗಳನ್ನು ಮಂಜೂರು ಮಾಡಲು ವಿನಂತಿಸಿ ಮನವಿ ಸಲ್ಲಿಸಿದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

## ಬೆಂಗಳೂರು ಜಲಮಂಡಳಿ ನೀರಿನ ಅದಾಲತ್

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ):**

ಬೆಂಗಳೂರು ಜಲಮಂಡಳಿಯು ದಿನಾಂಕ:20.08.2020 ಗುರುವಾರ ದಂದು ಸಕಾನಿಅ **ಆಗ್ನೇಯ-6, (ಪೂರ್ವ-2)-2, (ಪೂರ್ವವಿಲೇಜ್)-2, (ದಕ್ಷಿಣವಿಲೇಜ್)-1, ಪಶ್ಚಿಮ-3, ನೈರುತ್ಯ-3, ಆಗ್ನೇಯ-3, ವಾಯುವ್ಯ-6, ಕೇಂದ್ರ-3 ವಾಯುವ್ಯ-2, ಉತ್ತರ-3 ಮತ್ತು ಈಶಾನ್ಯ-2** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತ್ತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ

ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| **ಉಪವಿಭಾಗದ ಹೆಸರು** | **ವಿಳಾಸ** | **ದೂರವಾಣಿ ಸಂಖ್ಯೆ** |
|---|---|---|
| **(ಆಗ್ನೇಯ-6),** | 9ನೇ ಮುಖ್ಯರಸ್ತೆ, ಬಿ.ಟಿ.ಎಂ. 2ನೇ ಹಂತ, ಬೆಂಗಳೂರು-76 | 22945392 |
| **(ಪೂರ್ವ-2)-2,** | ಬಿ-31, ಐಟಿಐ ಕಾಲೋನಿ, ದೂರವಾಣಿ ನಗರ, ಬೆಂಗಳೂರು-16 | 25663688 |
| **(ಪೂರ್ವ ವಿಲೇಜ್)-2,** | ಕಾಡುಗೋಡಿ ಎಸ್.ಟಿ.ಪಿ ಆವರಣ, ವೈಟ್ ಫಿಲ್ಡ್ ರೈಲ್ವೆ ನಿಲ್ದಾಣ ಹತ್ತಿರ, ಸೋಮೇನಹಳ್ಳಿ(ಪೋ), ಕಾಡುಗೋಡಿ | 9738680018 |
| **(ದಕ್ಷಿಣ ವಿಲೇಜ್)-1** | 21ನೇ ಮುಖ್ಯ ರಸ್ತೆ, 11ನೇ ಬ್ಲಾಕ್, ಅಂಜನಾಪುರ | 9686566941 |
| **ಪಶ್ಚಿಮ-3** | ವಿಜಯನಗರ ವಾಟರ್ ಟ್ಯಾಂಕ್,ವಿಜಯನಗರ 8ನೇ ಮುಖ್ಯ ರಸ್ತೆ, ಎಂ.ಸಿ. ಲೇಔಟ್, ಬೆಂಗಳೂರು-40 | 23350020 |
| **ನೈರುತ್ಯ-3** | #3, ಎಂ.ಎನ್.ಕೆ ಪಾರ್ಕ್ ಬಸವನಗುಡಿ,ಬೆಂಗಳೂರು-04 | 22945155 |
| **(ಆಗ್ನೇಯ-3)** | ಸ್ವಾಮಿ ವಿವೇಕಾನಂದ ರಸ್ತೆ, ಆಡೋ ಮಾಲ್ ಎದುರು, ಹಲಸೂರು, ಬೆಂಗಳೂರು-08 | 22945159 |
| **(ವಾಯುವ್ಯ-6)** | ಪೈಪ್ ಲೈನ್ ರಸ್ತೆ, ಸುಂಕದ ಕಟ್ಟೆ,ಬೆಂಗಳೂರು-91 | 7259304007 |
| **(ಕೇಂದ್ರ-3)** | ನೇತಾಜಿ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು-05 | 22945167 |
| **(ವಾಯುವ್ಯ-2)** | 5ನೇ ಬ್ಲಾಕ್, ನಾಗರಭಾವಿ, ಹೊರವರ್ತುಲ ರಸ್ತೆ. ಬೆಂಗಳೂರು-72 | 22945184 |
| **(ಉತ್ತರ-3)** | 3ನೇ ಬ್ಲಾಕ್, ಬಿಇಎಲ್ ಲೇಔಟ್, ವಿದ್ಯಾರಣ್ಯಪುರ, ಬೆಂಗಳೂರು | 23621888 |
| **(ಈಶಾನ್ಯ-2)** | #55, 8ನೇ & 9ನೇ ಅಡ್ಡ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಬೆಂಗಳೂರು-20 | 22945135 |

**ಮೇಲೆ ತಿಳಿಸಲಾದ ಉಪವಿಭಾಗಗಳ ವ್ಯಾಪ್ತಿಯಲ್ಲಿ ಬರುವ ಸೇವಾಠಾಣೆಗಳ ವಿವರ ಈ ಕೆಳಕಂಡಂತಿದೆ.**

| **ಉಪವಿಭಾಗದ ಹೆಸರು** | **ಸೇವಾಠಾಣೆಗಳು** |
|---|---|

| | |
|---|---|
| **(ಆಗ್ನೇಯ-6),** | ಬಿ.ಟಿ.ಎಂ.ಲೇಔಟ್-1,2&3 |
| **(ಪೂರ್ವ-2)-2,** | ಕೆ.ಆರ್.ಪುರಂ, ಬಸವನಪುರ, ದೇವಸಂದ್ರ, ರಾಮಮೂರ್ತಿ ನಗರ, ವಿಜಿನಾಪುರ, ದೂರವಾಣಿನಗರ |
| **(ಪೂರ್ವ ವಿಲೇಜ್)-2,** | ಪೂರ್ವ ವಿಲೇಜ್-2-1 &2-2, ಕಾಡುಗೋಡಿ ವರ್ತೂರು |
| **(ದಕ್ಷಿಣ ವಿಲೇಜ್)**-1 | ಅಂಜನಾಪುರ,ಬ್ಯಾಂಕ್ ಆಫೀಸರ್ಸ್ ಲೇಔಟ್, ಗೊಟ್ಟಿಗೆರೆ |
| **ಪಶ್ಚಿಮ-3** | ಚಂದ್ರ ಲೇಔಟ್-1&2, ವಿಜಯನಗರ ಓ.ಹೆಚ್.ಟಿ, ಮೂಡಲಪಾಳ್ಯ |
| **ನೈರುತ್ಯ-3** | ಎಂ.ಎನ್.ಕೆ.ಪಾರ್ಕ್,ಬಿ.ಟಿ.ಆರ್,ಮೌಂಟ್‌ಜಾಯ್, ನಾಗೇಂದ್ರಬ್ಲಾಕ್, ಗಿರಿನಗರ, |
| **(ಆಗ್ನೇಯ-3)** | ಹಲಸೂರು, ದೊಮ್ಮಲೂರು,ಮಾರತ್ ಹಳ್ಳಿ |
| **(ವಾಯುವ್ಯ-6)** | ಹೆಗ್ಗನಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ. |
| **(ಕೇಂದ್ರ-3)** | ಫ್ರೇಜರ್ ಟೌನ್, ಮಚಲಬೆಟ್ಟ, ಪಿಳ್ಳಣ್ಣಗಾರ್ಡನ್ 1&2 |
| **(ವಾಯುವ್ಯ-2)** | ಕೇತಮಾರನಹಳ್ಳಿ, ರಾಜಾಜಿನಗರ, ವೆಸ್ಟ್ ಆಫ್ ಕಾರ್ಡ್ ರಸ್ತೆ-1&2, ಕಾಮಾಕ್ಷಿಪಾಳ್ಯ, ಕಮಲಾನಗರ, ಮಹಾಲಕ್ಷ್ಮೀ ಲೇಔಟ್, ಅಗ್ರಹಾರ ದಾಸರಹಳ್ಳಿ. |
| **(ಉತ್ತರ-3)** | ಸಿಂಗಾಪುರ, ವಿದ್ಯಾರಣ್ಯಪುರ, ಸಹಕಾರನಗರ |
| **(ಈಶಾನ್ಯ-2)** | ಕೆಂಪೇಗೌಡ ಟವರ್, ಕುಮಾರಪಾರ್ಕ್, ಜಯಮಹಲ್ |

ಕುಂದು ಕೊರತೆಗಳಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ.

ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯ ಬಳಸಿಕೊಳ್ಳಬಹುದಾಗಿದೆ ಹಾಗೂ **ಕೋವಿಡ್-19** ರ ಮಾರ್ಗದರ್ಶನದಂತೆ ಸಭೆಗೆ ಹಾಜರಾಗುವ ಸಂದರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು.

# BWSSB: Water Adalath in AEE

**Bengaluru, August 19 (Karnataka Information)**

BWSSB water Adalath is held on 20.08.2020 in **AEE(South East-6), (East-2)-2, (East Village -2), (South Village-1), (West-3), (South West-3), (South East-3), (North West-6), (Central-3), (North West-2), (North -3), and (North East -2)** sub divisions from 9:30.am to 11.00 am to settle the grievances concerned with the water billing, delay in providing water supply & sanitary connections, delay in converting from domestic connection to non domestic connection & other related issues. The details of the places where the Adalath is held is as follows.

| Sub-division | Address | Phone Number |
|---|---|---|
| **South East-6** | 9th Main road, BTM Water Tank, BTM 2nd stage, Bengaluru-76 | 22945392 |
| **(East-2)-2** | B-31, ITI Colony, Dooravani Nagar,Bengaluru-16 | 25663688 |
| **East village-2** | Kadugodi STP, Near White Field Railway Station, Somenahalli Post, Kadugodi | 9738680018 |
| **South Village -1** | 21st main road, Anjanapura, 11th Block, Anjanapura | 9686566941 |
| **West-3** | Opposite Vijayanagara Water Tank,Vijayanagar,8th Main, MC Layout, Bengaluru-40 | 23350020 |
| **South West-3** | #3, MNK Park, Basavanagudi, Bengaluru.-04 | 22945155 |
| **South East-3** | Swami Vivekananda Road, Opposite Lido Mall, Halasur, Bengaluru-08 | 22945159 |
| **North West-6** | Pipe Line Road, Sunkadakatte, Bengaluru-91 | 7259304007 |
| **Central-3** | Nethaji Road, Frazer town, Bengaluru-05 | 22945167 |
| **North West-2** | 5th Block, Nagarabhavi, Outer Ring Road, Bengaluru-72 | 22945184 |
| **North-3** | 3rd Block, BEL Layout, Vidyaranyapura, Bengaluru | 23621888 |

| North East-2 | #55, 8th & 9th cross, Central street, Bengaluru-20 | 22945135 |
|---|---|---|

**The details of service stations coming under the subdivisions mentioned above are as follows:**

| Sub-division | Service Stations |
|---|---|
| **South East-6** | BTM layout-1, 2 & 3 |
| **(East-2)-2** | K.R.Puram, Basavanapura, Devasandra, Ramamurthy Nagar, Vijinapura, Dooravaninagar |
| **East Village-2** | East village-2-1 & 2-2, Kadugodi, Varthur |
| **South Village -1** | Anjanapura, Bank Officer's Layout, Gottigere |
| **West-3** | Chandra Layout-1 &2, Vijayanagar OHT, Moodalapalya |
| **South West-3** | MNK Park, BTR, Mountjoy, Nagendra Block, Girinagar |
| **South East-3** | Halasoor, Dommalur, Maratha Halli |
| **North West-6** | Hegganahalli, Kottigepalya, Herohalli |
| **Central-3** | Frazer town, Machalibetta, Pillanna garden 1&2 |
| **North West-2** | Kethamaranahalli, Rajajinagar, West Off chord Road 1 &2, Kamakshipalya, Kamalanagar, Mahalakshmilayout, Agrahara Dasarahalli, |
| **North-3** | Singapura, Vidyaranyapura, Sahakarnagar |
| **North East -2** | Kempegowda Tower, Kumarapark, Jayamahal. |

For any problems regarding the water supply and all, public can contact 24x7 call centre: 22238888 helpline number: 1916 & whats app no: 8762228888.Public can utilize this adalath facilities to solve the problems regarding water supply and public are

requested to follow all precautionary measures according to **COVID-19** guidelines while attending the adalath.

# Government of Karnataka Portal to Know Covid Test Results using SRF ID

**Bengaluru, August 19 (Karnataka Information)**

Now you can know your covid test result by feeding SRF ID of your covid test in the following portal

https://www.covidwar.karnataka.gov.in/service1

Note: If you are positive, don't panic. Stay calm and isolate yourself at your home. Govt of Karnataka will automatically get in touch with you on your mobile number.

Call 108 for Emergency.

Call Apthamitra 14410 for Covid Medical Helpline.

## ಅಧಿಕಾರಿಗಳ ಮತ್ತು ಗುಮಾಸ್ತರ ನೇಮಕಾತಿ ಪರೀಕ್ಷೆಗೆ ಆನ್‌ಲೈನ್ ತರಬೇತಿ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವತಿಯಿಂದ **ಐ.ಬಿ.ಪಿ.ಎಸ್ ರಾಷ್ಟ್ರೀಕೃತ ಬ್ಯಾಂಕ್ ನವರು** ಮುಂದಿನ ದಿನಗಳಲ್ಲಿ ಒಂಬತ್ತು ಸಾವಿರ ಅಧಿಕಾರಿಗಳ ಮತ್ತು ಗುಮಾಸ್ತರ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಆನ್‌ಲೈನ್‌ನಲ್ಲಿ ನೀಡಲು ಆಯೋಜಿಸಿದೆ.

ಆಸಕ್ತರು ಆಗಸ್ಟ್ 25 ರೊಳಗಾಗಿ ಬೆಳಗ್ಗೆ 10.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಲು 0821–**2515944** ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದೆಂದು ಕರಾಮುವಿ ಕುಲಸಚಿವರಾದ **ಪ್ರೊ. ಲಿಂಗರಾಜಗಾಂಧಿ** ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಚಿವ ಸಂಪುಟ ಸಭೆ

**ಬೆಂಗಳೂರು, ಆಗಸ್ಟ್ 19 (ಕರ್ನಾಟಕ ವಾರ್ತೆ)**

**ಸಚಿವ ಸಂಪುಟದ ಸಭೆಯನ್ನು ಆಗಸ್ಟ್ 20 ರಂದು ಬೆಳಿಗ್ಗೆ 11–30 ಗಂಟೆಗೆ ಕೊಠಡಿ ಸಂಖ್ಯೆ 334, ಸಮ್ಮೇಳನ ಸಭಾಂಗಣ, ವಿಧಾನ ಸೌಧ, ಬೆಂಗಳೂರು ಇಲ್ಲಿ ಕರೆಯಲಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**